ಮಾರ್ಕೆಟ್‌ನವರು ಅವನ್ನೆಲ್ಲಾ ವಿಪರೀತ ಬೆಲೆಗೆ ಮಾರೋಕೆ ಪ್ರಾರಂಭ ಮಾಡಿದರು. ಇದು ಬಡವರ ಶೋಷಣೆ ಅಲ್ಲವೇ? ಸಣ್ಣ ಪುಟ್ಟ ಅಂಗಡಿಗಳಿಗೆ ಸ್ಥಾನವೇ ಇಲ್ಲವೇ? ಭವಿಷ್ಯವೇ ಇಲ್ಲವೇ? ಇದರ ಬಗ್ಗೆ ನೀವು ಬರೆದು ರಾಜಕಾರಣಿಗಳಿಗೆ ಅರಿವಾಗುವಂತೆ ಮಾಡಬೇಕು."

ಕೇಳಿ ಡೇವಿಡನಿಗೆ ಅನ್ನಿಸಿತು  ಅವಳು ಓದಿ ಬರೆದು ಮಾಡಿದ್ದರೆ ಅವಳು ನಿಜವಾಗಿ ಯಾವುದಾದರೂ ಉನ್ನತ ಸ್ಥಾನದಲ್ಲಿ ಇರುತ್ತಿದ್ದಳು. ಕಾದಂಬರಿಗೆ ಮತ್ತೊಂದು ಆಯಾಮ ದೊರೆಯಿತು – ಅವಳ ಸಾಮಾಜಿಕ ಜವಾಬ್ದಾರಿ. ಸುಮಾರು ಒಂದು ತಿಂಗಳಲ್ಲಿ ಎರಡು ಅಧ್ಯಾಯಗಳನ್ನು ಬರೆದು ಮುಗಿಸಿ, ಒಪ್ಪಂದದ ಪ್ರಕಾರ ಅವನ್ನು ಪ್ರಕಾಶಕರು ನೇಮಿಸಿದ್ದ ಸಂಪಾದಕರಿಗೆ ಕಳುಹಿಸಿದ. ಸಂಪಾದಕರು ಒಮ್ಮೆಗೇ ಈಮೇಲ್ ಮಾಡಿ, "ನಿಮ್ಮ ಬರಹ ಬಹಳ ಆಕರ್ಷಕವಾಗಿದೆ. ಹೀಗೆಯೇ ಮುಂದುವರೆಸಿ" ಎಂದು ನುಡಿದರು.

ಡೇವಿಡ್ ತನ್ನ ಕಾದಂಬರಿ ಮತ್ತು ಲೀಸಾಗಳಲ್ಲಿ ಲೀನವಾಗಿದ್ದಾಗ ಒಂದು ದಿನ ಸೇರಾಗೆ ಅವನನ್ನು ಪರೀಕ್ಷಿಸುವ ಬಯಕೆಯಾಯಿತು. ಒಂದು ಮಧ್ಯಾಹ್ನ ಯಾವ ಸುಳಿವನ್ನೂ ಕೊಡದೆ ನೇರ ಕೆಫೆಗೆ ಬಂದಳು. ಡೇವಿಡ್ ಅಲ್ಲಿ ಇರಲಿಲ್ಲ. ಅಲ್ಲಿಯ ವೈಟರುಗಳನ್ನು ಕೇಳಿದಳು. ಸಿಕ್ಕ ಉತ್ತರ,

"ಅವರು ಈ ನಡುವೆ ಇಲ್ಲಿ ಹೆಚ್ಚಾಗಿ ಬರುವುದಿಲ್ಲ. ಆಗೊಮ್ಮೆ, ಈಗೊಮ್ಮೆ ಬರುತ್ತಾರೆ. ಬಂದರೂ ಅರ್ಧ ಅಥವಾ ಮುಕ್ಕಾಲು ಗಂಟೆ ಇದ್ದು ಹೊರಟು ಬಿಡುತ್ತಾರೆ."

ಕೆರಳಿ ಸೇರಾ ಕಾರಿಗೆ ಬಂದು ಡೇವಿಡನಿಗೆ ಮೊಬೈಲ್ ಮಾಡಿದಳು.

"ಹಲೋ."

"ನಾನು ಸೇರಾ. ಎಲ್ಲಿದ್ದೀಯಾ ನೀನು?"

"ಕೆಫೇನಲ್ಲೇ ಇದೀನಲ್ಲಾ."

"ಹೌದಾ, ನಾನೂ ಆ ಕೆಫೇನಿಂದಾನೇ ಫೋನ್ ಮಾಡ್ತಾ ಇರೋದು."

"ಅದು ಹಾಗಲ್ಲ..." ಏನೋ ಹೇಳಹೊರಟ ಡೇವಿಡ್. ಸೇರಾ ಕೇಳಿಸಿಕೊಳ್ಳಲಿಲ್ಲ. ಫೋನನ್ನು ಆಫ್ ಮಾಡಿದಳು. ಅವರಿಬ್ಬರ ಅನಿವಾರ್ಯ ಮುಖಾಮುಖಿ ಅಂದು ಸಂಜೆಯೇ ಆಯಿತು.

"ನೀನು ಹೀಗೆ ನನ್ನನ್ನು ವಂಚಿಸುತ್ತೀಯಾ ಎಂದು ನಾನು ಭಾವಿಸಿರಲಿಲ್ಲ. ನೀನು ಸದಾ ಆ ಭಿಕಾರಿ ಮನೇಗಲ್ವಾ ಹೋಗ್ತಾ ಇರೋದು. ನನಗೆ ಇದು ಗೊತ್ತಿಲ್ಲ ಅಂತ ನೀನು ಅಂದುಕೊಂಡಿರಬಹುದು. ಒಂದು ತಿಳಿದುಕೋ ನನಗೆ ಎಷ್ಟೋ ದಿವಸದಿಂದ ಗೊತ್ತಿತ್ತು ಇದು. ಕಾರಿನಲ್ಲಿ ಕಂಡೋಮ್, ಮಗುವಿನ ಸಾಕ್ಸ್ ನೋಡಿದಾಗಲೇ ತಿಳೀತು ನನಗೆ."

"ನಾನೂ ಎಷ್ಟೋ ದಿನದಿಂದ ಹೇಳಬೇಕೂ ಅಂತ ಇದ್ದೆ. ಇಂತಹ ಮನೆಯಲ್ಲಿ ಇದ್ದುಕೊಂಡು ನಾನು ಸೃಜನಶೀಲನಾಗಿ ಬರೆಯಲಾರೆ."

"ಏನು ಕಡಿಮೆಯಾಗಿದೆ ಇಲ್ಲಿ ನಿನಗೆ?"

"ಏನೂ ಕಡಿಮೆಯಾಗಿಲ್ಲ, ಒಪ್ಪಿಕೊಳ್ಳುತ್ತೇನೆ, ಸುಖದ ಸೋಪಾನ ಈ ಮನೆ. ಆದರೆ ಕಲೆಗೆ ಅದು ಬೇಕಿಲ್ಲವೇನೋ. ಅದಕ್ಕೆ ಬೇಕಾಗಿರುವುದು ಜೀವಂತ ಬದುಕು, ಸೆಣಸಾಟ, ಮತ್ತು ಸವಾಲು. ಜನರ ಮಧ್ಯೆ ಅದು ಚಿಗುರುತ್ತದೆ. ಮಕ್ಕಳಾಟ, ದೊಡ್ಡವರ ಜಗಳ, ಕಿತ್ತಾಟ, ವೈರ ಇವೆಲ್ಲಾ ಇದ್ದಲ್ಲಿ ಸಾಹಿತ್ಯ ಹುಟ್ಟಿಕೊಳ್ಳುತ್ತದೆ."

"ಇಲ್ಲಿದ್ದುಕೊಂಡು, ಅದನ್ನು ವೀಕ್ಷಿಸಿ ಬರೆಯಬಹುದಿತ್ತು."

"ಇಲ್ಲ, ಆ ಜೀವನದಲ್ಲಿ ಒಬ್ಬನಾಗಿ ಭಾಗವಹಿಸಬೇಕು, ಒಳಹೊಕ್ಕು ನೋಡಬೇಕು. ಆಗಲೇ ನಿಜವಾದ ಸಾಹಿತ್ಯ ಮೂಡಿಬರುತ್ತದೆ."